ದಿಃ30.07.2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಸಾಕ್ಷಿಗೆ ಕ್ರಮಬದ್ದವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

(ಸಾಕ್ಷಿಗೆ ಉರ್ದು ಭಾಷೆ ಮಾತ್ರ ತಿಳಿದಿದ್ದು, ನ್ಯಾಯಾಲಯದ ಸಿಬ್ಬಂದಿಯಾದ ಶ್ರೀಮತಿ. ಜಬೀನ್ ಬಾನುರವರಿಗೆ ಪ್ರಮಾಣ ಬೋದನೆ ಮಾಡಿ, ಉರ್ದು ಭಾಷೆಯಿಂದ ಕನ್ನಡ ಭಾಷೆಗೆ ಯಥಾವತ್ತಾಗಿ ಸಾಕ್ಷಿ ದಾಖಲಿಸಲಾಯಿತು)

<u>ಪಾಟೀ ಸವಾಲುಃ ಆರೋಪಿಗಳ ಪರವಾಗಿ ಶ್ರೀ. ಎಂ.ಎಂ., ವಕೀಲರಿಂದಃ</u>

4. 1ನೇ ಆರೋಪಿತನು ಮಾಗಡಿಯಲ್ಲಿ ಬೀಡಿ ಫ್ಯಾಕ್ಟರಿ ಇಟ್ಟುಕೊಂಡು ಅಲ್ಲಿಯೇ ವಾಸ ಮಾಡುತ್ತಿದ್ದಾನೆ ಎನ್ನುವುದು ಸರಿ.

5. 2ನೇ ಆರೋಪಿ ನಸೀಮಾ ತಾಜ್ ಇವಳನ್ನು ಈ ಹಿಂದೆ ನಾನು ಎಲ್ಲಿಯೂ ನೋಡಿರುವುದಿಲ್ಲ.

6. ಆದರೆ, ಮೊದಲ ಬಾರಿಗೆ ನಾನು 2ನೇ ಆರೋಪಿತಳನ್ನು ಟಿವಿಯಲ್ಲಿ ನೋಡಿರುತ್ತೇನೆ.

7. 3ನೇ ಆರೋಪಿತಳು ಸುಮಾರು 18-20 ವರ್ಷಗಳಿಂದ ಬೆಂಗಳೂರಿನಲ್ಲಿ ನೆಲೆಸಿರುತ್ತಾಳೆ ಎನ್ನುವುದು ಸರಿ.

8. 4ನೇ ಆರೋಪಿ ತುಮಕೂರಿನಲ್ಲಿ ವಾಸವಾಗಿದ್ದರು ಎನ್ನುವುದು ಸರಿ.

9. ನನ್ನ ಮಗಳು ಆಯೀಷಾ ಮನೆಯ ಛಾವಿಯನ್ನು ಕೊಟ್ಟು ಹೋದಾಗ ರಾತ್ರಿ 8.00 ಗಂಟೆ ಆಗಿತ್ತು.

10. ನನ್ನ ಮಗಳು ಅರೇಬಕ್ ಶಾಲೆಗೆ ಹೋಗಿ ಬಂದ ನಂತರ ಮನೆಗೆ ಹೋಗಿ ಆಮೇಲೆ ಸದರಿ ಛಾವಿಯನ್ನು ನನಗೆ ಕೊಟ್ಟಿರುತ್ತಾಳೆ.

11. ಅರೇಬಿಕ್ ಶಾಲೆಗೆ ಹೋಗಿ ಬಂದ ನಂತರ ಆಯೀಷಾ ಮನೆಗೆ ಹೋಗಿ ಬಟ್ಟೆ ಬದಲಾಯಿಸಿಕೊಂಡು ಬಣ್ಣದ ಬಟ್ಟೆಗಳನ್ನು ಧರಿಸಿಕೊಂಡು ನನ್ನ ಬಳಿ ಬಂದಿದ್ದಳು.

12. ಸಾಮಾನ್ಯವಾಗಿ ಆಯೀಷಾ ಇವಳು ನಮ್ಮ ಮನೆಯ ಹತ್ತಿರ ಇರುವ ಮಕ್ಕಳ ಜೊತೆಗೆ ಆಟವಾಡುತ್ತಿದ್ದಳು.

13. ಆಯೀಷಾ ಇವಳು ನನ್ನ ನಾದಿನಿಯ ಮನೆಯ ಕಡೆಗೆ ಹೆಚ್ಚಿಗೆ ಹೋಗುತ್ತಿರಲಿಲ್ಲ.

14. ಆದಿನ ಮನೆ ಛಾವಿಯನ್ನು ನನ್ನ ಕೈಗೆ ಕೊಡುವಾಗ ಇಲ್ಲಿಯೇ ಆಟವಾಡಿಕೊಂಡು ಇರುತ್ತೇನೆ ಎಂದು ಹೇಳಿ ಹೋಗಿರುತ್ತಾಳೆ.

15. ಆದರೆ ನಾನು ಯಾರೊಂದಿಗೆ ಆಟವಾಡಿಕೊಂಡು ಇರುತ್ತೀಯಾ ಎಂದು ಕೇಳಿರಲಿಲ್ಲ.

16. ಸದರಿ ನಮ್ಮ ಅಂಗಡಿಯ ಸುತ್ತಮುತ್ತ ಸಾಕಷ್ಟು ಅಂಗಡಿಗಳು, ಸಿಲ್ಕ್ ಫ್ಯಾಕ್ಟರಿ, ವಾಸದ ಮನೆಗಳು ಇದ್ದು, ಸಾಕಷ್ಟು ಜನಸಂದಣಿ ಇರುತ್ತದೆ ಎನ್ನುವುದು ಸರಿ.

17. ಒಂದು ವೇಳೆ ನನ್ನ ಮಗಳು ಎಲ್ಲಿಯಾದರೂ ಹೋಗುತ್ತಿದ್ದಿದ್ದರೆ ಅದನ್ನು ನೋಡಿ ನಮ್ಮ ಮಗಳು ಈ ರೀತಿ ಈ ಕಡೆಗೆ ಹೋಗುತ್ತಿದ್ದಾಳೆಂದು ಬೇರೆಯವರು ನೋಡಿ ಹೇಳುತ್ತಿದ್ದರು ಎನ್ನುವುದು ಸರಿ.

18. ನಮ್ಮ ಮಗಳು ಕಾಣೆಯಾದ ಮೇಲೆ ನಾನು ನನ್ನ ಗಂಡನೊಂದಿಗೆ ಪೊಲೀಸ್ ಠಾಣೆಗೆ ಹೋಗಿರಲಿಲ್ಲ.

19. ಸದರಿ ನನ್ನ ಕಾಣೆಯಾದ ಮಗಳನ್ನು ಹುಡುಕಲೆಂದು ಸುಣ್ಣಕಟ್ಟು ಬೀದಿಯಲ್ಲಿ ಹೋಗಿದ್ದನು ಹೊರತುಪಡಿಸಿ, ಬೇರೆ ಎಲ್ಲೂ ಹೋಗಿರಲಿಲ್ಲ.

20. 1ನೇ ಆರೋಪಿ ನನ್ನ ಮನೆಯ ಮುಂದೆಯೇ ವಾಸ ಮಾಡುತ್ತಾನೆ ಎನ್ನುವುದು ಸರಿ.

21. 1ನೇ ಆರೋಪಿತನು ಪೊಲೀಸ್ ಠಾಣೆಗೆ ಹೋಗಿ ನಮ್ಮ ಏರಿಯಾದ ಕೌನ್ಸಿಲರ್ ಮುಖಾಂತರ ಫೋನ್ ಮಾಡಿಸಿ, ಪ್ರಕರಣವನ್ನು ಪೊಲೀಸರಿಂದ ದಾಖಲಿಸಿಕೊಳ್ಳಲು ಪ್ರಯತ್ನಿಸಿರುತ್ತಾನೆ ಎನ್ನುವುದು ಸರಿ.

22. 1ನೇ ಆರೋಪಿ ನನ್ನ ಗಂಡನೊಂದಿಗೆ ಇಡೀ ಮಾಗಡಿ ಪಟ್ಟಣ ತಿರುಗಿ ನನ್ನ ಮಗಳಾದ ಆಯೀಷಾ ಇವಳನ್ನು ಹುಡುಕಾಟ ಮಾಡಿ ಬಂದರೂ ಸಹ ಅವಳು ಸಿಕ್ಕಿರುವುದಿಲ್ಲ ಎನ್ನುವುದು ಸರಿ.

23. ಹೊಸಹಳ್ಳಿ ರಸ್ತೆಯಲ್ಲಿ ಒಂದು ಆಸ್ಥಾನ ಇರುತ್ತದೆ, ಆದರೆ ನಾನು ಅಲ್ಲಿಗೆ ಯಾವತ್ತೂ ಹೋಗಿರುವುದಿಲ್ಲ.

24. ಸದರಿ ನನ್ನ ಮಗಳ ಶವ ಸದರಿ ಆಸ್ಥಾನದ ಪಕ್ಕದಲ್ಲಿರುವ ಕಾಲುವೆಯಲ್ಲಿ ಸಿಕ್ಕಿದ್ದು, ಆಗ ನಾನೂ ಸಹ ಅಲ್ಲಿ ಹೋಗಿದ್ದೆನು.

25. ಆಗ ನಾನು, ನನ್ನ ಗಂಡ, ನನ್ನ ನಾದಿನಿ ಮತ್ತು ನಮ್ಮ ನೆಂಟಸ್ಥರು ಒಟ್ಟು 30-40 ಜನ ಅಲ್ಲಿಗೆ ಹೋಗಿದ್ದೆವು.

26. ಸದರಿ ಶವವನ್ನು ಗೋಣಿ ಚೀಲದಲ್ಲಿ ಹಾಕಿ, ಒಗೆದಿರುತ್ತಾರೆಂದು ಯಾರೋ ಹೇಳಿದ್ದರು, ಆದರೆ ಹೇಳಿದವರ ಹೆಸರು ನನಗೆ ಗೊತ್ತಿಲ್ಲ.

27. ಮೊದಲಿಗೆ ಹೋಗಿ ನೋಡಿದಾಗ ಸದರಿ ಶವ ಸಂಪೂರ್ಣವಾಗಿ ತಲೆಯನ್ನೊಳಗೊಂಡು ಗೋಣಿ ಚೀಲದ ಒಳಗೆ ಹಾಕಿ ಕಟ್ಟಿದ್ದು ಇತ್ತು.

28. ನಂತರ ಅದನ್ನು ಬಿಚ್ಚಿ ನೋಡಿದಾಗ ಬಾಯಲ್ಲಿ ಒಂದು ಬಟ್ಟೆ ಮತ್ತು ಪ್ಲಾಸ್ಟಿಕ್ ಪೇಪರ್ ಹಾಕಿ, ಹಿಜಾಬ್‌ನಿಂದ ಕೈಗಳನ್ನು ಹಿಂದಕ್ಕೆ ಕಟ್ಟಿದ್ದಲ್ಲದೇ ಮತ್ತು ಕಾಲುಗಳನ್ನೂ ಸಹ ಕಟ್ಟಿದ್ದರು.

29. ಜಡೆಯ ರಿಬ್ಬನ್‌ನ್ನು ಕುತ್ತಿಗೆಗೆ ಕಟ್ಟಿ ಬಿಗಿದಿತ್ತು.

30. ಕತ್ತನ್ನು ಕೊಯ್ದು ರಕ್ತದ ಗಾಯವಾಗಿತ್ತು.

31. ನಾವು ಸದರಿ ಸ್ಥಳಕ್ಕೆ ಹೋಗಿದ್ದಾಗ ಮಧ್ಯಾಹ್ನ 3.30 ಗಂಟೆ ಆಗಿತ್ತು.

32. ಪೊಲೀಸರು ಮಧ್ಯಾಹ್ನ 4.00-4.30 ಗಂಟೆ ಸಮಯದಲ್ಲಿ ಬಂದಿದ್ದರು.

33. ಪೊಲೀಸರು ಬಂದ ತಕ್ಷಣ ನನ್ನ ಮಗಳ ಶವವನ್ನು ರಾಜರಾಜೇಶ್ವರಿ ಆಸ್ಪತ್ರೆಗೆ ತೆಗೆದುಕೊಂಡು ಹೋಗಿರುತ್ತಾರೆ.

34. ಸದರಿ ಶವ ಆ ಸ್ಥಳದಲ್ಲಿ ಬಿದ್ದಿದ್ದ ವಿಚಾರ ನಮಗೆ ತಿಳಿದ ತಕ್ಷಣ 1ನೇ ಆರೋಪಿತನೂ ಸಹ ಸ್ಥಳಕ್ಕೆ ಬಂದಿದ್ದನು ಎನ್ನುವುದು ಸರಿ.

35. ನಾನು ಮಗಳನ್ನು ನೋಡಿದ ತಕ್ಷಣ ನನಗೆ ಎಚ್ಚರ ತಪ್ಪಿದ್ದು ನನಗೇನೂ ಗೊತ್ತಿರುವುದಿಲ್ಲ.

36. ಅದೇ ದಿನ ರಾತ್ರಿ 10.30-11.00 ಗಂಟೆ ಸಮಯದಲ್ಲಿ ನಮ್ಮ ಮನೆಗೆ ಪೊಲೀಸರು ಸದರಿ ಶವವನ್ನು ರಾಜರಾಜೇಶ್ವರಿ ಆಸ್ಪತ್ರೆಯಿಂದ ತಂದುಕೊಟ್ಟಿರುತ್ತಾರೆ.

37. ಆದಿನ ರಾತ್ರಿ ಮೃತ ಆಯೀಷಾ ಇವಳ ಶವಸಂಸ್ಕಾರ ಮಾಡಿದ ನಂತರ ನಾನು ಯಾವತ್ತೂ ಪೊಲೀಸ್ ಠಾಣೆಗೆ ಹೋಗಿರುವುದಿಲ್ಲ ಮತ್ತು ಪೊಲೀಸರು ನನ್ನ ಹೇಳಿಕೆಯನ್ನು ದಾಖಲಿಸಿಕೊಂಡಿರುವುದಿಲ್ಲ.

38. ನಾವು ಆರೋಪಿತರನ್ನು ಟಿವಿಯಲ್ಲಿ ನೋಡಿದ ನಂತರ ನಾನು ಸಾಕ್ಷಿ ನುಡಿಯುತ್ತಿದ್ದೇನೆ ಎನ್ನುವುದು ಸರಿ.

39. ಈ ಹಿಂದೆ ಈ ನ್ಯಾಯಾಲಯಕ್ಕೆ ಬಂದಾಗ ಪೊಲೀಸರು ಇದೇ ರೀತಿ ಸಾಕ್ಷಿ ನುಡಿಯಬೇಕೆಂದು ಹೇಳಿಕೊಟ್ಟ ನಂತರ ಸಾಕ್ಷಿ ನುಡಿದಿರುತ್ತೇನೆ ಎನ್ನುವುದು ಸರಿ.

40. ನಮ್ಮ ಮಗಳು ಕಾಣೆಯಾಗುವುದು ಮತ್ತು ಅವಳ ಸಾವಿಗೂ ಹಾಗೂ ಆರೋಪಿತರ ನಡುವೆ ಯಾವುದೇ ಸಂಬಂಧ ಇರುವುದಿಲ್ಲ ಎನ್ನುವುದು ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.